# ಜಿಲ್ಲಾಧಿಕಾರಿಗಳಿಗೆ ದ್ರಾಕ್ಷಿ ಬೆಳೆಗಾರರಿಂದ ಮನವಿ



ವಿಜಯಪುರ-:ಕೊರೊನಾ ಮಹಾಮಾರಿಯು ದೇಶದ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಿದ್ದು, ಅದರ ಕಪ್ಪುಛಾಯೆ ದ್ರಾಕ್ಷಿ ಬೆಳೆಗಾರರ ಮೇಲೂ ದಟ್ಟವಾಗಿ ಹಬ್ಬಿ ದ್ರಾಕ್ಷಿ ಬೆಳೆಗಾರ ರೈತರು ಕಂಗಾಲಾಗಿದ್ದಾರೆ. ಈ ನೈಸರ್ಗಿಕ ವಿಕೋಪಕ್ಕೆ ತುತ್ತಾದವರ ಪೈಕಿ ದ್ರಾಕ್ಷಿ ಬೆಳೆಗಾರರೂ ಹೊರತಲ್ಲ ಎಂಬುದು ಸರ್ಕಾರವು ಮನಗಾಣಬೇಕು. ಇಡೀ ವರ್ಷಪೂರ್ತಿ ಬೆಳೆಯುವ ದ್ರಾಕ್ಷಿ ಬೆಳೆಯು ಉತ್ಪನ್ನ ಮಾತ್ರ ವರ್ಷಕ್ಕೊಮ್ಮೆ, ಅದು ಬೇಸಿಗೆ ದಿನಗಳ ಪ್ರಾರಂಭಕ್ಕೆ. ಪ್ರತಿಬಾರಿಯೂ ಅತಿವೃಷ್ಟಿ, ಅನಾವೃಷ್ಟಿ, ಆಲಿಕಲ್ಲು ಮಳೆ ಹೀಗೆ ಒಂದಲ್ಲ ಒಂದು ಕಾರಣಗಳಿಂದಾಗಿ ದ್ರಾಕ್ಷಿ ಬೆಳೆ ಹಾಳಾಗುತ್ತಲೇ ಬಂದಿದೆ. ಆದರೆ ಈ ಬಾರಿ ಬೆಳೆಗಾರರಿಗೆ ಮೇಲಿಂದ ಮೇಲೆ ಹೊಡೆತಗಳು ಬೀಳುತ್ತಿವೆ. ಈ ಸಾರಿ ಉತ್ತಮ ಬೆಳೆ ಬಂದು ಇನ್ನೇನು ಫಸಲು ಕೈಗೆ ತಲುಪಿ ಮಾರಾಟಕ್ಕೆ ಅಣಿಯಾಗಬೇಕೆನ್ನುವಷ್ಟರಲ್ಲಿ ಕೊರೊನಾ ವೈರಸ್‌ನಿಂದ ಇಡೀ ದೇಶವೇ ಲಾಕ್‌ಡೌನ್ ಆಗಿ ಎಲ್ಲ ಬಗೆಯ ವ್ಯಾಪಾರ-ವಹಿವಾಟು ನಿಂತುಹೋಯಿತು.

ಈ ಸಂಕಷ್ಟಕ್ಕೆ ದ್ರಾಕ್ಷಿ ಬೆಳೆಗಾರರಿಗೆ ಆದ ಹಾನಿ ಅಷ್ಟಿಷ್ಟಲ್ಲ. ದ್ರಾಕ್ಷಿ ಬೆಳೆಗಾರರಿಗೆ ಒಮ್ಮೆ ನಷ್ಟ ಉಂಟಾದರೆ ಆ ಹಾನಿಯಿಂದ ಒಬ್ಬ ರೈತ ಮರಳಿ ಚೇತರಿಸಿಕೊಳ್ಳಲು ಎರಡು ವರ್ಷ ಬೇಕಾಗುತ್ತದೆ. ಈ ರೀತಿಯ ತೊಂದರೆಗಳನ್ನು ದ್ರಾಕ್ಷಿ ಬೆಳೆಗಾರರು ಕಳೆದ 20 ವರ್ಷಗಳಿಂದ ಎದುರಿಸುತ್ತಾ ಬಂದಿದ್ದಾರೆ. ಉತ್ತಮ ದ್ರಾಕ್ಷಿ ಬೆಳೆಗಾಗಿ ಹೆಚ್ಚು ಬಂಡವಾಳ ಹಾಕಬೇಕಾದ ರೈತನಿಗೆ ಏಕಾಏಕಿ ಹಾನಿಯಾದರೆ ಆಗುವ ಆರ್ಥಿಕ ಹಾಗೂ ಮಾನಸಿಕ ಆಘಾತವನ್ನು ತಡೆದುಕೊಳ್ಳುವಷ್ಟು ಶಕ್ತಿ ಬೆಳೆಗಾರರಿಗೆ ಇರುವುದಿಲ್ಲ. ಹಾಗಾಗಿ ಸರಕಾರವು ಹಣ್ಣು ಬೆಳೆಗಾರರಲ್ಲಿ ಒಣ ದ್ರಾಕ್ಷಿ, ಹಸಿ ದ್ರಾಕ್ಷಿ ಮತ್ತಿತರ ರೀತಿಯಲ್ಲಿ ವಿಂಗಡಣೆ ಮಾಡಿ ನೋಡುವ ದೃಷ್ಟಿಯಿಂದ ಹೊರಬಂದು, ಎಲ್ಲರನ್ನು ಒಂದೇ ಅಡಿಯಲ್ಲಿ ಪರಿಗಣಿಸಿ ಈ ಕೆಳಕಾಣಿಸಿದ ನಮ್ಮ ಬೇಡಿಕೆಗಳಿಗೆ ಕೂಡಲೇ ಸ್ಪಂದಿಸಿ ಪರಿಹಾರವನ್ನು ನೀಡಲು ವಿನಂತಿಸಲಾಗಿದೆ.

ಬೆರಳೆಣಿಕೆಯಷ್ಟು ಬೆಳೆಗಾರರು ಮಾತ್ರ ವಿಮೆ ವ್ಯಾಪ್ತಿಯಲ್ಲಿದ್ದು, ಬಹುತೇಕ ದ್ರಾಕ್ಷಿ ಬೆಳೆಗಾರರು ವಿಮೆಯಿಂದ ಹೊರಗುಳಿದಿದ್ದಾರೆ. ಇಂತಹ ಪ್ರಾಕೃತಿಕ ವಿಕೋಪಗಳು ಉಂಟಾದಾಗ ಎಲ್ಲ ಬೆಳೆಗಾರರನ್ನು ಒಂದೇ ಸೂರಿನಡಿ ಪರಿಗಣಿಸಿ ಪ್ರತಿಯೊಬ್ಬರಿಗೂ ಸೂಕ್ತ ರೀತಿಯಲ್ಲಿ ವೈಜ್ಞಾನಿಕವಾಗಿ ನಷ್ಟ ಪರಿಹಾರವನ್ನು ನೀಡುವುದು.

ದ್ರಾಕ್ಷಿ ಬೆಳೆಗಾರರ ಮನವಿಯನ್ನು ರಾಜ್ಯ ಸರಕಾರವು ಕೇಂದ್ರ ಸರಕಾರಕ್ಕೂ ಸಲ್ಲಿಸಿ, ಕೃಷಿ ಮಂತ್ರಾಲಯ ಹಾಗೂ ರೈತರ ಕಲ್ಯಾಣ ಇಲಾಖೆ ಅಡಿಯಲ್ಲಿ ದ್ರಾಕ್ಷಿ ಬೆಳೆಗೆ ಸಂಬಂಧಿಸಿದಂತೆ ಆಯಾ ಪ್ರದೇಶವಾರು ಆದಷ್ಟು ಬೇಗ ಸ್ಥಳೀಯವಾಗಿ ಕೂಡಲೇ ಸಹಾಯಧನವನ್ನು ನೀಡುವ ವ್ಯವಸ್ಥೆಯನ್ನು ಮತ್ತು ಯೋಜನೆಗಳನ್ನು ರೂಪಿಸುವುದು.

ರೈತರ ನೋವುಗಳನ್ನು ಪರಿಶೀಲಿಸಿದ ಮೇರೆಗೆ ಆರ್ಥಿಕ ತಜ್ಞರು ಸಲಹೆ ನೀಡಿರುವ ಪ್ರಕಾರ ಮುಂದಿನ ವರ್ಷದ ಬೆಳೆಗೆ ಚೇತರಿಸಿಕೊಳ್ಳಲು ಪ್ರತಿಯೊಂದು ಹೆಕ್ಟೇರ್‌ಗೆ ರೂ. 2,80,000 ಅವಶ್ಯಕತೆ ಇದೆ. ಈಗಾಗಲೇ ಹೈರಾಣಾಗಿರುವ ರೈತ ಮತ್ತೆ ಮುಂದಿನ ವರ್ಷದ ಕನಸಿಗೆ ಹಣ ಕೂಡಿಸಬೇಕಿದೆ. ಕಾರಣ ಸೂಚಿಸಿದ ಹಣವನ್ನು ಬೆಂಬಲ ನೀಡುವ ನಿಟ್ಟಿನಲ್ಲಿ ರೈತರಿಗೆ ದೊರೆತಲ್ಲಿ ಅನುಕೂಲವಾಗುವುದು. ಹಿಂದೆ 2014ರಲ್ಲಿ ರಾಜ್ಯ ಸರಕಾರವು ದ್ರಾಕ್ಷಿ ಬೆಳೆಗಾರರಿಗೆ ಪ್ರತಿ ಹೆಕ್ಟೇರ್‌ಗೆ ರೂ. 40,000 ಗಳ ಸಹಾಯಧನವನ್ನು ನೀಡಿತ್ತು ಎಂಬುದನ್ನು ನಾವು ತಿಳಿಸಬಯಸುತ್ತೇವೆ. ಈಗಾಗಲೇ ಕೆಲವು ಬೆಳೆಗಾರರಿಗೆ ಒಂದು ಹೆಕ್ಟೇರ್‌ಗೆ ರೂ. 15,000/- ಗಳನ್ನು ನೀಡಿದ್ದು, ಆದರೆ ಎಲ್ಲ ಬೆಳೆಗಾರರು ಆ ವಲಯದಲ್ಲಿ ಇಲ್ಲವಾದ್ದರಿಂದ ಆ ರೀತಿ ತಾರತಮ್ಯ ಮಾಡದೇ ಎಲ್ಲರನ್ನು ಒಂದೇ ಎಂದು ಪರಿಗಣಿಸಿ ಪರಿಹಾರ ನೀಡುವುದು.

ದ್ರಾಕ್ಷಿ ಬೆಳೆಗಾರರ ಇಂತಹ ಕಷ್ಟಕಾಲದಲ್ಲಿ ಕರ್ನಾಟಕ ಸರಕಾರವು ಜೊತೆಯಾಗಿ ನಿಲ್ಲಬೇಕು. ದ್ರಾಕ್ಷಿ ಕೃಷಿಗೆ ಸಂಬಂಧಿಸಿದ ಔಷಧಿಗಳು, ಉಪಕರಣಗಳೆಲ್ಲ ದುಪ್ಪಟ್ಟು ಬೆಲೆಗೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿದ್ದು, ಸರಕಾರ ಕೂಡಲೇ ಕ್ರಮಕ್ಕೆ ಮುಂದಾಗಬೇಕು. ಸ್ಟಾಕ್ ಇಲ್ಲ, ಉತ್ಪಾದನೆ ನಿಂತಿದೆ, ಕೊರತೆ ಇದೆ ಇತ್ಯಾದಿ ಕಾರಣಗಳನ್ನು ಹೇಳಿ ವಿತರಕರು, ಮಧ್ಯವರ್ತಿಗಳು ಕಪ್ಪುದಂಧೆಯಲ್ಲಿ ತೊಡಗಿದ್ದು, ಈ ಮೋಸದಿಂದ ದ್ರಾಕ್ಷಿ ಬೆಳೆಗಾರರಿಗೆ ಹಿಂದಿನಂತೆ ಸಾಮಾನ್ಯ ದರದಲ್ಲಿ ಔಷಧಿ, ಕ್ರಿಮಿನಾಶಕ, ಖಾದ್ಯ, ಗೊಬ್ಬರ, ಸಲಕರಣೆಗಳು ಇತ್ಯಾದಿಗಳೆಲ್ಲವೂ ಕೈಗೆಟುಕ್ಕುತ್ತಿಲ್ಲ. ತಾಲೂಕು ಮಟ್ಟದಲ್ಲಿ ಈ ಕುರಿತು ವಿಶೇಷ ವಿಚಕ್ಷಣಾ ಅಧಿಕಾರಿಗಳನ್ನು ನೇಮಿಸಿ ಇಂತಹ ಅಕ್ರಮಗಳಿಗೆ ತಡೆಯೊಡ್ಡಿ ಒಟ್ಟಾರೆ ಒಂದು ವ್ಯವಸ್ಥಿತವಾದ ಸರಕಾರದ ಚೌಕಟ್ಟಿನೊಳಗಡೆ ಸದ್ಯದ ವಾತಾವರಣ ಹತೋಟಿಗೆ ಬರುವತನಕ ತೋಟಗಾರಿಕಾ ಇಲಾಖೆ, ರೈತ ಸಂಪರ್ಕ ಕೇಂದ್ರಗಳ ಮೂಲಕ ಬೆಳೆಗಾರರಿಗೆ ಕೃಷಿ ಸಂಬಂಧಿತ ಕೃಷಿ ಸಂಬಂಧಿತ ಉತ್ತಮ ಗುಣಮಟ್ಟದ ವಸ್ತುಗಳು ಸಿಗುವಂತಾದಾಗ ನಿಟ್ಟುಸಿರು ಬಿಡುವಂತಾದೀತು.

ಮಹಾರಾಷ್ಟ್ರದ ವ್ಯಾಪಾರಸ್ಥರಿಗೆ ಖರೀದಿದಾರರಿಗೆ ಕರ್ನಾಟಕಕ್ಕೆ ಬರಲು ಕೂಡಲೇ ಅವಕಾಶ ನೀಡುವುದು. ಇಲಾಖೆಯ ನಿಯಮಾವಳಿಯಂತೆ ಒಳಬರುವ ಪ್ರತಿಯೊಬ್ಬರನ್ನು ಪರೀಕ್ಷೆಗೆ ಒಳಪಡಿಸಿ ಕೊವಿಡ್-19 ನೆಗೆಟಿವ್ ರಿಪೋರ್ಟ್ ಇದ್ದವರನ್ನು ಮಾತ್ರ ಒಳಬಿಡುವುದು. ಈ ಮೂಲಕ ಉತ್ತರ ಕರ್ನಾಟಕದ ದ್ರಾಕ್ಷಿ ಬೆಳೆಗಾರರಿಗೆ ಒಂದಿಷ್ಟು ಸಹಾಯ ಮಾಡಿದಂತಾಗುವುದು.

ಕೃಷಿ ಉತ್ಪನ್ನ, ತೋಟಗಾರಿಕಾ ಉತ್ಪನ್ನ, ಮಾರಾಟ ಸಾಗಾಣಿಕೆ ವಹಿವಾಟಿಗೆ ತೊಂದರೆಯಾಗದಂತೆ ಸರಕಾರ ಕ್ರಮ ಕೈಗೊಂಡರೂ ಕೂಡ ಮುಕ್ತ ಮಾರುಕಟ್ಟೆ ಅಥವಾ ಆನ್‌ಲೈನ್ ಟ್ರೇಡಿಂಗ್ ನಡೆದಿಲ್ಲ. ಒಣ ದ್ರಾಕ್ಷಿಗೆ ಸರಕಾರ ಬೆಂಬಲ ಬೆಲೆ ನೀಡಿ ಖರೀದಿಸುವುದು ಮತ್ತು ಹಾನಿಯಾದ ಬೆಳೆಗೆ ಒಂದು ನಿರ್ದಿಷ್ಟ ವ್ಯಾಪ್ತಿಯ ವಿಮೆಗೆ ಒಳಪಡಿಸಿ ಪರಿಹಾರ ನೀಡುವುದು. ಆನ್‌ಲೈನ್ ಟ್ರೇಡಿಂಗ್ ಬಂದ್ ಮಾಡದೇ ಕೂಡಲೇ ಅನುಕೂಲವಾಗುವಂತೆ ಪ್ರಾರಂಭಿಸುವುದು.

# ಬೆಂಕಿ ಆಕಸ್ಮಿಕ: ಆರ್ಥಿಕ ನೆರವು ಮಂಜೂರು

## ಶಾಸಕಿ ಲಕ್ಷ್ಮಿ ಹೆಬ್ಬಾಳಕರ್ ಮನವಿಗೆ ಸ್ಪಂದಿಸಿ ಮಂಜೂರು ಮಾಡಿದ ಸಿಎಂ ಯಡಿಯೂರಪ್ಪ

ಬೆಳಗಾವಿ - ಬೆಳಗಾವಿ ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಕಿ ಆಕಸ್ಮಿಕದಿಂದ ಮನೆಗಳು ಸುಟ್ಟು ಆರ್ಥಿಕ ನಷ್ಟಕ್ಕೀಡಾಗಿದ್ದವರಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಧನಸಹಾಯ ಮಂಜೂರಾಗಿದೆ.ಶಾಸಕಿ ಲಕ್ಷ್ಮಿ ಹೆಬ್ಬಾಳಕರ್ ಅವರ ಮನವಿಗೆ ಸ್ಪಂದಿಸಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಒಟ್ಟೂ 9 ಮನೆಗಳಿಗೆ ತಲಾ 1 ಲಕ್ಷ ರೂ.ಗಳಂತೆ 9 ಲಕ್ಷ ರೂ. ಮಂಜೂರು ಮಾಡಿದ್ದಾರೆ.

ಹಲಗಾ, ಹಿರೇ ಬಾಗೇವಾಡಿ ಹಾಗೂ ಬಡಸ್ ಕೆ ಹೆಚ್ ಗ್ರಾಮಗಳಲ್ಲಿ ಆಕಸ್ಮಿಕವಾಗಿ ಬೆಂಕಿ ಅನಾಹುತ ಉಂಟಾಗಿತ್ತು. ಅನೇಕ ಮನೆಗಳು ಬೆಂಕಿಗೆ ಆಹುತಿಯಾಗಿರುವ ಹಿನ್ನೆಲೆಯಲ್ಲಿ ಸಂತ್ರಸ್ತರ ಕಷ್ಟಗಳಿಗೆ ಸ್ಪಂದಿಸಿ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಹಾನಿಗೀಡಾದ ಮನೆಗಳಿಗೆ ಪರಿಹಾರ ನೀಡುವ ಸಲುವಾಗಿ ಲಕ್ಷ್ಮಿ ಹೆಬ್ಬಾಳಕರ್ ಮನವಿ ಪತ್ರಗಳನ್ನು ಸಲ್ಲಿಸಿದ್ದರು.ಹಲಗಾದ ಶಾಂತಿನಾಥ ಚಿಕ್ಕಪರಪ್ಪ ದೇಸಾಯಿ, ನಭಿರಾಜ ಪಾಯಪ್ಪ ಚಿಕ್ಕಪರಪ್ಪ, ವಸಂತ ಜಿನ್ನಪ್ಪ ಚಿಕ್ಕಪರಪ್ಪ, ಸುನೀಲ ಜಿನ್ನಪ್ಪ ದೇಸಾಯಿ, ಭರತೇಶ ದೆವಪ್ಪ ಚಿಕ್ಕಪರಪ್ಪ, ಹಿರೇಬಾಗೇವಾಡಿಯ ಶಿವರಾಯಪ್ಪ ಸಿದ್ದಲಿಂಗಪ್ಪ ಗಾಣಗಿ, ಗಜೇಂದ್ರನಾಥ ಗುರಪ್ಪ ಅಗಸಿಮನಿ, ಚಂದ್ರಪ್ಪ ಅಪ್ಪಯಪ್ಪ ಅಗಸಿಮನಿ, ಮಂಜುನಾಥ ಅಪ್ಪಯ್ಯಪ್ಪ ಅಗಸಿಮನಿ ಹಾಗೂ ಬಡಸ್ ಕೆಎಚ್ ನ ಮಾರುತಿ ರುದ್ರಪ್ಪ ಕರಡಿ ಇವರ ಮನೆಗಳು ಬೆಂಕಿಗೆ ಆಹುತಿಯಾಗಿದ್ದವು. ಅದರಂತೆಯೇ ಮುಖ್ಯಮಂತ್ರಿಗಳು 9 ಸಂತ್ರಸ್ತರಿಗೆ ಒಂದು ಲಕ್ಷ ರೂ. ಗಳ ಪರಿಹಾರದಂತೆ ಒಟ್ಟು 9 ಲಕ್ಷ ರೂ,ಗಳನ್ನು ಬಿಡುಗಡೆ ಮಾಡಲು ಸೂಚಿಸಿದ್ದಾರೆ. ಆದಷ್ಟು ಬೇಗ ಸಂತ್ರಸ್ತರಿಗೆ ಪರಿಹಾರದ ಚೆಕ್ ಗಳನ್ನು ಹಸ್ತಾಂತರಿಸುತ್ತೇನೆ ಎಂದು ಹೆಬ್ಬಾಳಕರ್ ತಿಳಿಸಿದ್ದಾರೆ.

# ಗುಣಮುಖ ಕೋವಿಡ ಸೊಂಕಿತ ರೋಗಿ ಬಿಡುಗಡೆ

ಗದಗ-:ಪಿ. 973, 28 ವರ್ಷದ ಪುರುಷ ರೋಗಿ ಸಾ. ಮಂಜುನಾಥ ನಗರ ಗದಗ ಇವರನ್ನು ಕೊವಿಡ ಸೋಂತಿಕ ಎಂದು ಗುರುತಿಸಿ ದಿನಾಂಕ 12/05/2020 ರಂದು ಇವರನ್ನು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಗದಗನಲ್ಲಿ ಗಂಟಲು ದ್ರವದ ಮಾದರಿಯನ್ನು ತೆಗೆದುಕೊಂಡಿದ್ದು, ಅವರಿಗೆ ಕೋವಿಡ ಸೊಂಕು ಇರುವುದೆಂದು ದೃಡಪಟ್ಟಿದ್ದು ಅವರನ್ನು ದಿನಾಂಕ 14/05/2020 ರಂದು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೋವಿಡ ಪ್ರತ್ಯೇಕತಾ ವಿಭಾಗದಲ್ಲಿ ಒಳರೋಗಿಯಾಗಿ ದಾಖಲಿಸಿಲಾಗಿತ್ತು.

ಪಿ. 1178, 30 ವರ್ಷದ ಪುರುಷ ರೋಗಿ ಸಾ. ದೇರಿಹಾಲ ಶಿರೋಳ ಗದಗ ಇವರನ್ನು ಕೊವಿಡ ಸೋಂತಿಕ ಎಂದು ಗುರುತಿಸಿ ದಿನಾಂಕ 16/05/2020 ರಂದು ಇವರನ್ನು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಗದಗನಲ್ಲಿ ಗಂಟಲು ದ್ರವದ ಮಾದರಿಯನ್ನು ತೆಗೆದುಕೊಂಡಿದ್ದು, ಅವರಿಗೆ ಕೋವಿಡ ಸೊಂಕು ಇರುವುದೆಂದು ದೃಡಪಟ್ಟಿದ್ದು ಅವರನ್ನು ದಿನಾಂಕ 17/05/2020 ರಂದು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೋವಿಡ ಪ್ರತ್ಯೇಕತಾ ವಿಭಾಗದಲ್ಲಿ ಒಳರೋಗಿಯಾಗಿ ದಾಖಲಿಸಿಲಾಗಿತ್ತು.

ಪಿ. 1180, 58 ವರ್ಷದ ಪುರುಷ ರೋಗಿ ಸಾ. ಗಂಜಿಬಸವೇಶ್ವರ ವೃತ್ತ್, ಗದಗ ಇವರನ್ನು ಕೊವಿಡ ಸೋಂತಿಕ ಎಂದು ಗುರುತಿಸಿ ದಿನಾಂಕ 16/05/2020 ರಂದು ಇವರನ್ನು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಗದಗನಲ್ಲಿ ಗಂಟಲು ದ್ರವದ ಮಾದರಿಯನ್ನು ತೆಗೆದುಕೊಂಡಿದ್ದು, ಅವರಿಗೆ ಕೋವಿಡ ಸೊಂಕು ಇರುವುದೆಂದು ದೃಡಪಟ್ಟಿದ್ದು ಅವರನ್ನು ದಿನಾಂಕ 17/05/2020 ರಂದು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೋವಿಡ ಪ್ರತ್ಯೇಕತಾ ವಿಭಾಗದಲ್ಲಿ ಒಳರೋಗಿಯಾಗಿ ದಾಖಲಿಸಿಲಾಗಿತ್ತು.

ಪಿ. 1181, 32 ವರ್ಷದ ಪುರುಷ ರೋಗಿ ಸಾ. ಗಂಜಿಬಸವೇಶ್ವರ ವೃತ್ತ್, ಗದಗ ಇವರನ್ನು ಕೊವಿಡ ಸೋಂತಿಕ ಎಂದು ಗುರುತಿಸಿ ದಿನಾಂಕ 16/05/2020 ರಂದು ಇವರನ್ನು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಗದಗನಲ್ಲಿ ಗಂಟಲು ದ್ರವದ ಮಾದರಿಯನ್ನು ತೆಗೆದುಕೊಂಡಿದ್ದು,

ಅವರಿಗೆ ಕೋವಿಡ ಸೊಂಕು ಇರುವುದೆಂದು ದೃಡಪಟ್ಟಿದ್ದು ಅವರನ್ನು ದಿನಾಂಕ 17/05/2020 ರಂದು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೋವಿಡ ಪ್ರತ್ಯೇಕತಾ ವಿಭಾಗದಲ್ಲಿ ಒಳರೋಗಿಯಾಗಿ ದಾಖಲಿಸಿಲಾಗಿತ್ತು.

ಪಿ. 1182, 12 ವರ್ಷದ ಪುರುಷ ರೋಗಿ ಸಾ. ಗಂಜಿಬಸವೇಶ್ವರ ವೃತ್ತ್, ಗದಗ ಇವರನ್ನು ಕೊವಿಡ ಸೋಂತಿಕ ಎಂದು ಗುರುತಿಸಿ ದಿನಾಂಕ 16/05/2020 ರಂದು ಇವರನ್ನು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಗದಗನಲ್ಲಿ ಗಂಟಲು ದ್ರವದ ಮಾದರಿಯನ್ನು ತೆಗೆದುಕೊಂಡಿದ್ದು, ಅವರಿಗೆ ಕೋವಿಡ ಸೊಂಕು ಇರುವುದೆಂದು ದೃಡಪಟ್ಟಿದ್ದು ಅವರನ್ನು ದಿನಾಂಕ 17/05/2020 ರಂದು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೋವಿಡ ಪ್ರತ್ಯೇಕತಾ ವಿಭಾಗದಲ್ಲಿ ಒಳರೋಗಿಯಾಗಿ ದಾಖಲಿಸಿಲಾಗಿತ್ತು.

ಈ ಎಲ್ಲಾ 5 ರೋಗಿಗಳಿಗೆ ನಮ್ಮ ಸಂಸ್ತೆಯಲ್ಲಿ ನುರಿತ ವೈದ್ಯ ಹಾಗೂ ವೈದ್ಯೇತರ ತಂಡದವರಿಂದ ಕೋವಿಢ ರೋಗಕ್ಕೆ ಚಿಕಿತ್ಸೆಯನ್ನು ನೀಡಲಾಗಿದ್ದು, ಅವರು ಚಿಕಿತ್ಸೆಗೆ ಉತ್ತಮವಾಗಿ ಪ್ರತಿಕ್ರಿಯಿಸಿದ್ದು ಅವರು ಒಳರೋಗಿಯಾಗಿ ಇರುವ ಸಮಯದಲ್ಲಿ ಅವರಿಗೆ ಯಾವುದೇ ತೊಂದರೆಗಳು ಕಂಡುಬಂದಿರುವದಿಲ್ಲಾ. ಚಿಕಿತ್ಸೆಯ ನಂತರದಲ್ಲಿ ಇವರನ್ನು ದಿನಾಂಕ 27/5/2020 ರಂದು ನಮ್ಮ ಸಂಸ್ಥೆಯ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲಾಗಿ ಅವರು ಗಂಟಲು ಮಾದರಿಗಳು ನೆಗೆಟಿವ್ ಆಗಿದ್ದರಿಂದ ಅವರನ್ನು ದಿನಾಂಕ 28/5/2020 ರಂದು ಆಸ್ಪತ್ರೆ ಇಂದ ಗುಣಮುಖ ಪ್ರಕರಣವೆಂದು ಬಿಡುಗಡೆ ಮಾಡುತ್ತಿದ್ದೇವೆ. ಅವರಿಗೆ ಮುಂದಿನ 14 ದಿನಗಳ ಕಾಲ ಮನೆಯಲ್ಲಿಯೇ ಇರುವ ಹಾಗೂ ಆರೋಗ್ಯದಲ್ಲಿ ಏನಾದರೂ ತೊಂದರೆ ಆದಲ್ಲಿ ನಮ್ಮನ್ನು ಸಂಪರ್ಕಿಸಲು ಸೂಚನೆ ನೀಡಲಾಗಿದ್ದು, ಅವರನ್ನು ಆರೋಗ್ಯ ಕಾರ್ಯಕರ್ತರು ನಿರಂತರ ನಿಗಾವಹಿಸುತ್ತರುವರು ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದು ಸದರಿ ವಿಷಯವನ್ನು ಪ್ರಕಟನೆಗಾಗಿ ಕೋರಿದೆ.

ಸದರಿ ಸಮಯದಲ್ಲಿ ಚಿಕಿತ್ಸೆ ನೀಡಿದ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಎಲ್ಲಾ ವೈದ್ಯರಿಗೂ, ಅರೇ ವೈದ್ಯಕೀಯ ಸಿಬ್ಬಂದಿಗಳಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಚಿಕಿತ್ಸೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಮಾರ್ಗದರ್ಶನ ನೀಡಿದ ಕರ್ನಾಟಕ ಸರ್ಕಾರದ ಸನ್ಮಾನ್ಯ ಶ್ರೀ ಸಿ. ಸಿ. ಪಾಟೀಲ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸನ್ಮಾನ್ಯ ಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ಡಾ. ಸುಧಾಕರ, ವೈದ್ಯಕೀಯ ಶಿಕ್ಷಣ ಇಲಾಖೆಯ ಸನ್ಮಾನ್ಯ ಮಂತ್ರಿಗಳು, ಶ್ರೀ ಶಿವಕುಮಾರ ಉದಾಸಿ, ಸನ್ಮಾನ್ಯ ಲೋಕಸಭಾ ಸದಸ್ಯರು, ಶ್ರೀ ಪಿ ಸಿ ಗದ್ದಿಗೌಡರ, ಸನ್ಮಾನ್ಯ ಲೋಕಸಭಾ ಸದಸ್ಯರು, ಶ್ರೀ ಎಚ್. ಕೆ. ಪಾಟೀಲ, ಸನ್ಮಾನ್ಯ ಶಾಸಕರು ಗದಗ, ಶ್ರೀ ಕಳಕಪ್ಪಾ ಬಂಡಿ, ಸನ್ಮಾನ್ಯ ಶಾಸಕರು ರೋಣ, ಶ್ರೀ ರಾಮಣ್ಣಾ ಲಮಾಣಿ, ಸನ್ಮಾನ್ಯ ಶಾಸಕರು ಶಿರಹಟ್ಟಿ ಮತ್ತು ಶ್ರೀ ಎಸ್. ವಿ. ಸಂಕನೂರ, ಸನ್ಮಾನ್ಯ ವಿಧಾನಪರಿಷತ್ ಸದಸ್ಯರು, ವೈದ್ಯಕೀಯ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರುಗಳಿಗೆ ಹಾಗೂ ನೆರವು ನೀಡಿದ ಜಿಲ್ಲಾಡಳಿತದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಮತ್ತು ಗದಗದ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೆ ಉಪಸ್ಥಿತರಿದ್ದರು.

# ಚೆಕ್‌ಪೋಸ್ಟ್‌ಗಳಿಗೆ ಜಿಲ್ಲಾಧಿಕಾರಿಗಳಿಂದ ಭೇಟಿ-ಪರಿಶೀಲನೆ



ವಿಜಯಪುರ.ಮೇ. 28: ಮಹಾರಾಷ್ಟ್ರ ರಾಜ್ಯದಿಂದ ಜಿಲ್ಲೆಗೆ ಪ್ರವೇಶ ಮಾಡುವ ಪ್ರಯಾಣಿಕರ ಮೇಲೆ ತೀವ್ರ ನಿಗಾ ಇಡಲಾಗಿದ್ದು, ಆ ರಾಜ್ಯದ ಅಧಿಕೃತ ಪಾಸ್ ಇಲ್ಲದೆ ಜಿಲ್ಲೆಗೆ ಪ್ರವೇಶ ನೀಡಲಾಗುವುದಿಲ್ಲವೆಂದು ಜಿಲ್ಲಾಧಿಕಾರಿ ವೈ.ಎಸ್‌ಪಾಟೀಲ ಅವರು ತಿಳಿಸಿದ್ದಾರೆ.ಉಮದಿ, ಶಿರಾಡೋಣ ಹಾಗೂ ಧೂಳಖೇಡ ಚೆಕ್‌ಪೋಸ್ಟ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅನಧೀಕೃತವಾಗಿ ಚೆಕ್‌ಪೋಸ್ಟ್‌ದಿಂದ ಯಾರೂ ಹೊರ ರಾಜ್ಯದ ಪ್ರಯಾಣಿಕರು ಜಿಲ್ಲೆಗೆ ಪ್ರವೇಶ ಪಡೆಯದಂತೆ ಮುನ್ನೆಚ್ಚರಿಕೆ ವಹಿಸಲು ಅವರು ಸೂಚನೆ ನೀಡಿದರು.ಅದರಂತೆ ಜಿಲ್ಲೆಗೆ ಯಾರಾದರೂ ಮಹಾರಾಷ್ಟ್ರ ರಾಜ್ಯದಿಂದ ಪ್ರವೇಶ ಪಡೆಯುವ ಬಗ್ಗೆ ಗಮನಕ್ಕೆ ಬಂದಲ್ಲಿ ಆಯಾ ಸ್ಥಳೀಯ ಪೊಲೀಸ್ ಠಾಣೆಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡುವಂತೆಯೂ ಕೂಡ ಅವರು ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಮನವಿ ಮಾಡಿದರು.ಈಗಾಗಲೇ ಕೋವಿಡ್-19 ಅಪಾಯದ ಹಿನ್ನೆಲೆಯಲ್ಲಿ ಮಹಾರಾಷ್ಟ್ರದಿಂದ ಬರುವ ಪ್ರಯಾಣಿಕರ ಮೇಲೆ ತೀವ್ರ ನಿಗಾ ಇಡಲಾಗಿದ್ದು, ಅಧೀಕೃತ ಪಾಸ್ ಇಲ್ಲದೆ ಪ್ರವೇಶ ಪಡೆಯುವುದು ಕಂಡು ಬಂದಲ್ಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಅದರಂತೆ ಸ್ಥಳೀಯರು ಕೂಡ ತೀವ್ರ ನಿಗಾ ಇಟ್ಟು ಮಾಹಿತಿ ಒದಗಿಸಿ ಆಯಾ ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆಗೆ ಸಹಕರಿಸುವಂತೆ ಅವರು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಚೆಕ್‌ಪೋಸ್ಟ್‌ದಲ್ಲಿ ಮುನ್ನೆಚ್ಚರಿಕೆಯಾಗಿ ಪ್ರಯಾಣಿಕರ ತಪಾಸಣೆ ಮಾಡುತ್ತಿರುವ ಬಗ್ಗೆಯೂ ಪರಿಶೀಲನೆ ನಡೆಸಿದರು. ಸ್ಥಳೀಯ ಸಾರ್ವಜನಿಕರಲ್ಲಿ ಕೋವಿಡ್ -19 ಮುನ್ನೆಚ್ಚರಿಕೆಗಳ ಬಗ್ಗೆ ಅನಧಿಕೃತವಾಗಿ ಜಿಲ್ಲೆಗೆ ಪ್ರವೇಶ ಪಡೆಯುವ ಪ್ರಯಾಣಿಕರ ಬಗ್ಗೆಯೂ ಮಾಹಿತಿ ಒದಗಿಸುವ ಕುರಿತು ಪೊಲೀಸ್ ಇಲಾಖೆಯಿಂದ ಸೂಕ್ತ ಜಾಗೃತಿಯನ್ನು ಮೂಡಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳೊಂದಿಗೆ ಎಸ್ಪಿ ಅನುಪಮ್ ಅಗರವಾಲ್, ಜಿ.ಪಂ ಸಿಇಒ ಗೋವಿಂದ ರೆಡ್ಡಿ, ಚಡಚಣ ಸಿಪಿಐ ಶ್ರೀ ಚಿದಂಬರ, ಪಿಎಸ್‌ಐ ಬಾಗೇವಾಡಿ ಸೇರಿದಂತೆ ಇತರರು ಇದ್ದರು.

# ರಾಜ್‌ಕುಮಾರ ಈಶ್ವರ ತಾಳೂಕರ್ ನಿಧನ



ಬೆಳಗಾವಿ : ನಗರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿವೃತ್ತ ನೌಕರ ಹಾಗೂ ವಡಗಾವಿಯ ನಿವಾಸಿಯಾಗಿದ್ದ ರಾಜ್‌ಕುಮಾರ ಈಶ್ವರ ತಾಳೂಕರ್(55) ಬುಧವಾರ ಬೆಳಿಗ್ಗೆ ನಿಧನ ಹೊಂದಿದ್ದರು.

ಮೃತರ ಅಂತ್ಯಕ್ರಿಯೆಯು ಹಳೆ ಬೆಳಗಾವಿಯ ಸ್ಮಶಾನದಲ್ಲಿ ಸಂಜೆ ನಡೆಯಿತು. ರಾಜಕುಮಾರ್ ತಾಳೂಕರ್ ಅವರು ಈ ಹಿಂದೆ ನಗರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಹೊಂದಿದ್ದರು. ಮೃತರು ತಮ್ಮ ಹಿಂದೆ ಪತ್ನಿ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಪಿಎಂಇಜಿಪಿ ಯೋಜನೆಯಡಿ ಸಾಲ ಸೌಲಭ್ಯ

ಗದಗ.ಮೇ.28: ಸ್ವಯಂ ಉದ್ಯೋಗ ಪ್ರಾರಂಭಿಸಲು ಜಿಲ್ಲೆಯ 38 ಭಾವಿ ಉದ್ದಿಮೆದಾರರಿಗೆ 2020-21 ನೇ ಸಾಲಿನಲ್ಲಿ ಪಿಎಂಇಜಿಪಿ ಯೋಜನೆಯಡಿ ಸಾಲ ಸೌಲಭ್ಯಕ್ಕಾಗಿ ಆನ್‌ಲೈನ್ ಮುಖಾಂತರ ಅರ್ಜಿ ಅಹ್ವಾನಿಸಲಾಗಿದೆ.8ನೇ ತರಗತಿ ಮೇಲ್ಪಟ್ಟು ವಿದ್ಯಾರ್ಹತೆ ಹೊಂದಿರುವವರಿಗೆ ಕೈಗಾರಿಕಾ ಘಟಕ ಸ್ಥಾಪಿಸಲು ಗರಿಷ್ಟ 25 ಲಕ್ಷ ಹಾಗೂ ಸೇವಾ ಘಟಕಗಳಿಗೆ ಗರಿಷ್ಟ 10 ಲಕ್ಷ ಸಾಲ ಸೌಲಭ್ಯ ಪಡೆಯಲು ಅವಕಾಶವಿದೆ. 8ನೇ ತರಗತಿಗಿಂತ ಕಡಿಮೆ ವಿದ್ಯಾರ್ಹತೆ ಹೊಂದಿರುವವರಿಗೆ ಕೈಗಾರಿಕಾ ವಲಯದಲ್ಲಿ 10 ಲಕ್ಷ ಹಾಗೂ ಸೇವಾ ವಲಯದಲ್ಲಿ 5 ಲಕ್ಷ ಸಾಲ ಪಡೆಯಲು ಅವಕಾಶವಿರುತ್ತದೆ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08372-231398, 230771. 9821071023 ಸಂಪರ್ಕಿಸಲು ಗದಗ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಪ್ರಕಟನೆ ತಿಳಿಸಿದೆ.

# ಜಿಲ್ಲಾ ಕೈಗಾರಿಕಾ ಕೇಂದ್ರ: ಪ್ರಭಾರ ಸ್ವೀಕಾರ

ಗದಗ,ಮೇ.28: ಪ್ರಶಾಂತ ಬಾರಿಗಿಡದ ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ಕೇಂದ್ರ ಕೊಪ್ಪಳ ಇವರು ಹೆಚ್ಚುವರಿಯಾಗಿ ಜಂಟಿ ನಿರ್ದೇಶಕರು, ಗದಗ ಜಿಲ್ಲಾ ಕೈಗಾರಿಕಾ ಕೇಂದ್ರದ ಪ್ರಭಾರ ವಹಿಸಿಕೊಂಡಿದ್ದಾರೆ. ಗದಗ ಜಿಲ್ಲಾ ಕೇಂದ್ರದಲ್ಲಿ ಬುಧವಾರ, ಶುಕ್ರವಾರ ಹಾಗೂ ಶನಿವಾರಗಳಂದು ಅವರು ಲಭ್ಯವಿರುತ್ತಾರೆ ಎಂದು ಪ್ರಕಟನೆ ತಿಳಿಸಿದೆ.

# ಮಾಶಾಸನ ಪಡೆಯುತ್ತಿರುವ ಕಲಾವಿದರಿಗೆ ಸೂಚನೆ

ಗದಗ.ಮೇ.28: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಪಡೆಯುತ್ತಿರುವ ಗದಗ ಜಿಲ್ಲೆಯ ಕಲಾವಿದರು, ಸಾಹಿತಿಗಳು ಹಾಗೂ ವಿಧವಾ ಮಾಸಾಶನ ಪಡೆಯುತ್ತಿರುವ ಕಲಾವಿದರು ಜೂನ್ 06 ರೊಳಗಾಗಿ ಖುದ್ದಾಗಿ ಗದಗ ಜಿಲ್ಲಾಡಳಿತ ಭವನದಲ್ಲಿರುವ ಸಹಾಯಕ ನಿರ್ದೇಶಕರ ಕಛೇರಿಗೆ ಭೇಟಿ ನೀಡಿ ನಿಗದಿತ ನಮೂನೆಯ ಅರ್ಜಿ ಭರ್ತಿ ಮಾಡಿ ಪೂರಕ ದಾಖಲೆಗಳನ್ನು ಲಗತ್ತಿಸಿ ಸಲ್ಲಿಸಬೇಕು. ತಮ್ಮ ಪಾಸ್ ಪೋರ್ಟ ಅಳತೆಯ ಭಾವಚಿತ್ರ, ಆಧಾರ, ಪಡಿತರ, ಚುನಾವಣಾ ಗುರುತಿನ ಚೀಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಮಾಸಾಶನ ಆದೇಶ ಪತ್ರ ಇವುಗಳ ಪ್ರತಿ ಮತ್ತು ಮಾಸಾಶನ ಪಡೆಯುತ್ತಿರುವ ಬ್ಯಾಂಕಿನ ಪಾಸ್‌ಬುಕ್ ನಕಲು ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಎಸ್.ಎಸ್.ಎಲ್.ಸಿ ಪರೀಕ್ಷೆ ಜಿಲ್ಲೆಯ ಯಾವೊಬ್ಬ ಪರೀಕ್ಷಾರ್ಥಿ ಪರೀಕ್ಷೆಯಿಂದ ವಂಚಿತರಾಗಬಾರದು: ಎಂ.ಜಿ. ಹಿರೇಮಠ

(1ನೇ ಪುಟದಿಂದ)

ಮಾರ್ಗಾಧಿಕಾರಿಗಳನ್ನು ನೇಮಿಸಲಾಗಿದೆ. ಕೋವಿಡ್-19 ಸೋಂಕು ತಡೆಗಟ್ಟಲು ದೈಹಿಕ ಅಂತರ ಕಾಯ್ದುಕೊಳ್ಳುವ ಉದ್ದೇಶದಿಂದ ಹೆಚ್ಚುವರಿ ಕೊಠಡಿ ಮತ್ತು ಆಸನಗಳ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಗದಗ ಅಪರ ಜಿಲ್ಲಾಧಿಕಾರಿ ಸತೀಶ್ ಕುಮಾರ್ ಎಂ, ಜಿಲ್ಲಾ ಪೊಲೀಸ ವರಿಷ್ಟಾಧಿಕಾರಿ ಯತೀಶ್ ಎನ್, ಆರೋಗ್ಯ ಇಲಾಖೆಯ ಆರ್. ಸಿ.ಎಚ್. ಅಧಿಕಾರಿ ಡಾ. ಗೊಜನೂರ, ತಾಲೂಕಾ ಕ್ಷೇತ್ರ ಶಿಕ್ಷಣಾಧಿಕಾರಿಗಳು , ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಎಸ್.ಎಸ್.ಎಲ್.ಸಿ. ಪರೀಕ್ಷಾ ವೇಳಾಪಟ್ಟಿ : - ಜೂನ್ 25 ರಂದು ದ್ವಿತೀಯ ಭಾಷೆ , 27 ರಂದು ಗಣಿತ, 29 ರಂದು ವಿಜ್ಞಾನ , ಜುಲೈ 1 ರಂದು ಸಮಾಜ ವಿಜ್ಞಾನ, ಜುಲೈ 2 ಪ್ರಥಮ ಭಾಷೆ ಹಾಗೂ ಜುಲೈ 4 ರಂದು ತೃತೀಯ ಭಾಷೆ ಪರೀಕ್ಷೆಗಳು ಜರುಗಲಿವೆ. ದ್ವಿತೀಯ ಹಾಗೂ ತೃತೀಯ ಭಾಷೆ ಬೆ.10.30 ರಿಂದ ಮ. 1.30 ರವರೆಗೆ ಹಾಗೂ ಇನ್ನುಳಿದ ವಿಷಯಗಳಿಗೆ ಬೆ. 10.30 ರಿಂದ ಮ 1.45 ರವರೆಗೆ ಪರೀಕ್ಷೆಗಳು ಜರುಗಲಿವೆ.

# ಎ.ಪಿ.ಎಂ.ಸಿ ಮಾರುಕಟ್ಟೆಗೆ ಅಧ್ಯಕ್ಷರಾಗಿ ನೀಲಪ್ಪ, ಉಪಾಧ್ಯಕ್ಷರಾಗಿ ಸೋಮಪ್ಪ ಆಯ್ಕೆ



ಶಿರಹಟ್ಟಿ: ಶಿರಹಟ್ಟಿ-ಲಕ್ಷ್ಮೇಶ್ವರ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ನೂತನ ಅಧ್ಯಕ್ಷರಾಗಿ ನೀಲಪ್ಪ ಹತ್ತಿ ಹಾಗೂ ಉಪಾಧ್ಯಕ್ಷರಾಗಿ ಸೋಮಪ್ಪ ಲಮಾಣಿ ಆಯ್ಕೆಯಾಗಿದ್ದಾರೆ.

ಅಧಿಕಾರ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷ ನೀಲಪ್ಪ ಹತ್ತಿ ಕೃಷಿ ಉತ್ಪನ್ನ ಸಮಗ್ರ ಅಭಿವೃದ್ಧಿಗೆ ಎಲ್ಲಾ ನಿರ್ದೇಶಕರ ವಿಶ್ವಾಸ ಪಡೆದು ಸರ್ಕಾರದಿಂದ ವಿಶೇಷ ಅನುದಾನ ತಂದು ಮಾರುಕಟ್ಟೆಯ ಅಭಿವೃದ್ಧಿ ಮಾಡುವುದು ಹಾಗೂ ಮಾರುಕಟ್ಟೆಯಲ್ಲಿ ರೈತರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಿಮ್ಮರೆಡ್ಡಿ ಮರಡ್ಡಿ, ಫಕ್ಕೀರೇಶ ರಟ್ಟಿಹಳ್ಳಿ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಮುಂಬೈ-ಗದಗ ರೈಲು ಪ್ರಯಾಣಿಕರನ್ನು ಕ್ವಾರಂಟೇನಗೆ ಗಣೇಶಸಿಂಗ್ ಬ್ಯಾಳಿ ಆಗ್ರಹ



ಬೆಟಗೇರಿ 28. ಮುಂಬೈ-ಗದಗ- ಮುಂಬೈ ರಳು ದಿನಾಂಕ 2ನೇ ಜೂನ್ ದಿಂದ ಪ್ರಾರಂಭಿಸಲು ರೇಲ್ವೆ ಇಲಾಖೆ ನಿರ್ಧರಿಸಿದ್ದು ಸ್ವಾಗತಾರ್ಹ ಆದರೆ ಮಹಾರಾಷ್ಟ್ರ ಅದರಲ್ಲೂ ವಿಶೇಷವಾಗಿ ಮುಂಬೈಯಲ್ಲಿ ಕೋರೋನಾ ಸೋಮಕಿತರು ಹೆಚ್ಚಿಗೆ ಇರುವುದರಿಂದ ಆ ರೈಲು ಗಾಡಿಗೆ ಬರುವ ಪ್ರಯಾಣಿಕರಿಗೆ ಗದಗ-ಬೆಟಗೇರಿ ಅವಳಿ ನಗರಕ್ಕೆ ಬಂದು ಭಯಾನಕ ವಾತಾವರಣ ಸಾರ್ವಜನಿಕರಲ್ಲಿ ಆತಂಕ ಮನೆ ಮಾಡಿದೆ ಎಂದು ಬೆಟಗೇರಿ ರೇಲ್ವೆ ಹೋರಾಟ ಸಮಿತಿ ಅಧ್ಯಕ್ಷ ಗಣೇಶಸಿಂಗ್ ಬ್ಯಾಳಿ ತಮ್ಮ ನೋವು ತೋಡಿಕೊಂಡಿದ್ದಾರೆ.

ರೇಲ್ವೆ ಇಲಾಖೆ ಮುಂಬೈ-ಗದಗ ರೈಲು ಗಾಡಿಗೆ ಬರುವ ಪ್ರಯಾಣಿಕರಿಗೆ ಸೂಕ್ತವಾದ ಕ್ವಾರಂಟೈನ ಮತ್ತು ಕೋರೋನಾ ಸೋಂಕು ಹರಡದಂತೆ ಏನು ಕ್ರಮ ಕೈಕೊಂಡಿದೆ ಎಂದು ಗಣೇಶಸಿಂಗ್ ಬ್ಯಾಳಿ ಪ್ರಶ್ನಿಸಿದ್ದಾರೆ.

ಕೂಡಲೇ ಈ ಕುರಿತು ಗದಗ ರೇಲ್ವೆ ನಿಲ್ದಾಣ ಈ ಕುರಿತು ಮುಂಜಾಗ್ರತೆ ವ್ಯವಸ್ಥೆ ಕುರಿತು ಸಾರ್ವಜನಿಕರಿಗೆ ತಿಳುವಳಿಕೆ ನೀಡಬೇಕು ಎಂದು ಬೆಟಗೇರಿ ರೇಲ್ವೆ ಹೋರಾಟ ಸಮಿತಿ ಪರವಾಗಿ ಸಮಿತಿ ಅಧ್ಯಕ್ಷ ಗಣೇಶಸಿಂಗ್ ಬ್ಯಾಳಿ ರೇಲ್ವೆ ಇಲಾಖೆಗೆ ಆಗ್ರಹಿಸಿದ್ದಾರೆ.

# ಮದ್ಯ ಮಾರಾಟ ನಿಷೇಧ

ಗದಗ.ಮೇ 28 : ಕೊರೋನಾ ವೈರಸ್ ( ಕೋವಿಡ್-19) ಹರಡುವುದನ್ನು ತಡೆಗಟ್ಟುವ ಕ್ರಮವಾಗಿ ಗದಗ ಜಿಲ್ಲೆಯಾದ್ಯಂತ ಲಾಕ್ ಡೌನ್ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮೇ 30 ರ ಸಂಜೆ 7 ಗಂಟೆಯಿಂದ ಜೂನ್ 1 ರ ಬೆಳಗಿನ 7 ಗಂಟೆಯವರೆಗೆ ಮದ್ಯ ಮಾರಾಟ ಹಾಗೂ ಸಾಗಾಟ ನಿಷೇಧಿಸಲಾಗಿದೆ. ಅಬಕಾರಿ ಉಪ- ಆಯುಕ್ತರು, ಗದಗ ಇವರು ತಮ್ಮ ವ್ಯಾಪ್ತಿಯಲ್ಲಿ ಬರುವ ಆದೇಶವನ್ನು ಪರಿಣಾಮಕಾರಿಯಾಗಿ ಜಾರಿಗೆ ಬರುವಂತೆ ಕ್ರಮ ಕೈಗೊಳ್ಳಬೇಕೆಂದು ಗದಗ ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ ಆದೇಶ ಹೊರಡಿಸಿದ್ದಾರೆ.

# ರೈತ ಬಾಂಧವರ ಗಮನಕ್ಕೆ

ಗದಗ.ಮೇ 28 : ರೈತಬಾಂಧವರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಭಾರತೀಯ ಹತ್ತಿ ನಿಗಮ ನಿಯಮಿತ ಗದಗ ಶಾಖೆ, ಇವರು ಬೆಂಬಲ ಬೆಲೆ ಯೋಜನೆಯಡಿ ಮಂಗಳವಾರ, ಗುರುವಾರ ಮತ್ತು ಶನಿವಾರಗಳಂದು ಮಾತ್ರ ಹತ್ತಿ ಖರೀದಿಸಲಾಗುತ್ತಿದ್ದು, ಹತ್ತಿ ದಾಸ್ತಾನು ಮಾಡಲು ಸ್ಥಳದ ಅಭಾವವಿರುವ ಕಾರಣ ದಿನಾಂಕ: 29-05-2020 ರಿಂದ 06-06-2020 ರ ವರೆಗೆ ಹತ್ತಿ ಖರೀದಿ ಕೇಂದ್ರವನ್ನು ಬಂದ್ ಮಾಡಲಾಗುವುದು. ಆದುದರಿಂದ, ರೈತಭಾಂದವರು ದಿನಾಂಕ: 07-06-2020 ರ ನಂತರ ತಮ್ಮ ಹತ್ತಿ ಮಾರಾಟಕ್ಕೆ ತರಬೇಕೆಂದು ವಿನಂತಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಿ.ಸಿ.ಐ. ಕಛೇರಿ, ಕಾಟನ್ ಸೇಲ್ ಸೊಸಾಯಿಟಿ, ಗದಗ ದೂರವಾಣಿ ಸಂಖ್ಯೆ: 9743792299 ಇವರನ್ನು ಸಂಪರ್ಕಿಸಲು ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಕಟಣೆ ತಿಳಿಸಿದೆ.